SCCH – 01
MVC No.2436/2025
PW2

<u>ಸಾಕ್ಷಿಗೆ ದಿನಾಂಕಃ **05.12.2025** ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ</u>

**<u>ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ ಕುಮಾರಿ ಕೆ.ಎಂ.ಎ ರವರಿಂದಃ</u>**

1) ನಾನು ಈ ಪ್ರಕರಣದಲ್ಲಿ ಸಾಕ್ಷಿದಾರನಾಗಿದ್ದೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಬದಲಾಗಿ ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆಗೆ ಅನುಸಾರವಾಗಿ ನಮ್ಮ ವಕೀಲರು ಸಿದ್ಧಪಡಿಸಿದ್ದಾರೆ.

2) ಅನುಮತಿ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.**29** ಎಂದು ಗುರುತಿಸಿದೆ.

3) ಎಂ.ಎಸ್.ರಾಮಯ್ಯ ಆಸ್ಪತ್ರೆಯಲ್ಲಿ ಇಟ್ಟಿರುವಂತಹ **Medico Legal Case Register** ಮತ್ತು **Police Intimation** ದಾಖಲೆಗಳನ್ನು ಮತ್ತು ಇದೇ ದಾಖಲೆಗಳಲ್ಲಿ ದಿ.**30.01.2025** ರಂದು ಇರುವಂತಹ ಹಾಳೆಯ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದಾರೆ. ಸದರಿ ಮೂಲ ದಾಖಲೆಗಳನ್ನು ಮತ್ತು ನಕಲುಗಳನ್ನು ಹೋಲಿಕೆ ಮಾಡಿ ನೋಡಲಾಗಿ ಈ ಮೂಲ ದಾಖಲೆಗಳನ್ನು ಆಧಾರವಾಗಿ ಇಟ್ಟುಕೊಂಡು

ಯಾಂತ್ರಿಕ ಸಹಾಯದಿಂದ ಈ ಫೋಟೋ ಪ್ರತಿಗಳನ್ನು ಸಿದ್ಧಪಡಿಸಿದ್ದಾರೆ ಎಂದು ಕಂಡು ಬರುತ್ತದೆ. ಆದ ಕಾರಣದಿಂದ ಸದರಿ ಫೋಟೋ ಪ್ರತಿಗಳನ್ನು ನಿ.ಪಿ.**30** ಮತ್ತು **31** ಎಂದು ಗುರುತಿಸಿದೆ ಮತ್ತು ಮೂಲ ದಾಖಲೆಗಳನ್ನು ಈ ಸಾಕ್ಷಿದಾರರಿಗೆ ವಾಪಸ್ಸು ನೀಡಿದೆ.

4) ಓರ್ವ ಕೆ.ಬಾಬು ಎಂಬ ವ್ಯಕ್ತಿಯು ನಮ್ಮ ಆಸ್ಪತ್ರೆಗೆ ಯಾವ ದಿನಾಂಕದಂದು ಅಡ್ಮಿಟ್ ಆದರು ಮತ್ತು ಅವರಿಗೆ ಯಾವ ರೀತಿಯ ಗಾಯಗಳು ಆಗಿದ್ದವು ಮತ್ತು ಆತನಿಗೆ ಯಾವ ರೀತಿಯ ಚಿಕಿತ್ಸೆಗಳನ್ನು ಕೊಡಲಾಗಿದೆ ಎಂಬ ಎಲ್ಲಾ ವಿವರಗಳನ್ನು ಒಳಗೊಂಡಿರುವಂತಹ **3** ಫೈಲ್ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.**32** ಎಂದು ಗುರುತಿಸಿದೆ.

**ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀಮತಿ ಡಿ.ಎಲ್. ವಕೀಲರಿಂದಃ**

1) ಈ ದಿನ ನಾನು ಹಾಜರುಪಡಿಸಿದಂತಹ ನಿ.ಪಿ.**30** ರಿಂದ **32** ದಾಖಲೆಗಳ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ. ಮೇಲೆ ಹೇಳಿದಂತಹ ಬಾಬು ರವರಿಗೆ ಚಿಕಿತ್ಸೆಯನ್ನು ನೀಡಿದಂತಹ ವೈದ್ಯರು ಇವತ್ತಿಗೂ ಸಹಾ ನಮ್ಮ ಆಸ್ಪತ್ರೆಯಲ್ಲಿಯೇ ಕೆಲಸ ಮಾಡುತ್ತಾ ಇದ್ದಾರೋ ಅಥವಾ ಇಲ್ಲವೊ ಎಂಬ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ.

2) ಅರ್ಜಿದಾರರಾದ ಕೆ.ಬಾಬು ರವರಿಗೆ ಸಹಾಯ ಆಗಲಿ ಎಂಬ ಉದ್ದೇಶದಿಂದ

SCCH – 01
MVC No.2436/2025
PW2

ನಾನು ನಿ.ಪಿ.**30** ರಿಂದ **32** ಎಂದು ಗುರುತು ಆಗಿರುವ ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು.

**<u>ಪಾಟೀ ಸವಾಲು: 1 ನೇ ಎದುರುದಾರರ ಪರ ವಕೀಲರಿಂದಃ</u>**

ಸದರಿ ಎದುರುದಾರರು ಮತ್ತು ಅವರ ಪರ ವಕೀಲರು ಹಾಜರಿಲ್ಲ ಮತ್ತು ಯಾವುದೇ ಲಿಖಿತ ಹೇಳಿಕೆ ಸಲ್ಲಿಸಿಲ್ಲ. ಆದ ಕಾರಣದಿಂದ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.